

# ಅವಕಾಶಗಳು ಬಾಗಿಲು ಬಡಿದಾಗ..

**ಅದೃಷ್ಟ ಎನ್ನುವುದನ್ನು ನಂಬಿ ಕೂರಬೇಡಿ. ನಿಮ್ಮ ಪ್ರಯತ್ನಗಳನ್ನು ಮಾಡುತ್ತಲೇ ಇರಿ. ನಿಮ್ಮ ಅದೃಷ್ಟ ಖುಲಾಯಿಸಬೇಕು ಅಂದರೆ, ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳುವ ಶಕ್ತಿ ನಿಮಗಿದೆ ಅನ್ನುವ ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕು.**

**■ ಸುನಂದಾ ಎಸ್. ಭರಮನಾಯ್ಕರ**

ಅರ್ಹತೆ ಇರುವಾಗ ಅವಕಾಶಗಳು ನಮ್ಮನ್ನು ಹುಡುಕಿಕೊಂಡು ಬರಬೇಕು. ಆದರೆ ಎಲ್ಲ ಸಮಯ ನಮ್ಮದಲ್ಲವಾದ್ದರಿಂದ ಕೆಲವೊಮ್ಮೆ ಸ್ವಾತಿ ಮಳೆಗೆ ಚಿಪ್ಪು ಬಾಯ್ದೆರೆದು ಕಾಯುವಂತೆ ಕಾಯಬೇಕಾಗುತ್ತದೆ. ನಮ್ಮ ಸುತ್ತಮುತ್ತ ಸಾವಿರಾರು ಸ್ಫೂರ್ತಿ ತುಂಬುವ ವ್ಯಕ್ತಿತ್ವಗಳಿವೆ. ಅವರ ಜೀವನದ ಪ್ರೇರಣಾತ್ಮಕ ಘಟನೆಗಳನ್ನು ನಾವು ಹೇಗೆ ನಮ್ಮದಾಗಿಸಿಕೊಳ್ಳುತ್ತೇವೆ ಎಂಬುದು ಮುಖ್ಯ. ಕೆಲವೊಮ್ಮೆ ನಾವು ಅನೇಕ ಅವಕಾಶಗಳಿಂದ ವಂಚಿತರಾಗಿರುತ್ತೇವೆ. ಅಂತಹ ಸಮಯದಲ್ಲಿ ಮನಸ್ಸಿಗೆ ಕೊಂಚ ಬೇಸರ ಉಂಟಾಗುವುದು ಸಹಜ. ಆದರೆ ಅವಕಾಶಗಳು ಮುಂದೆಯೂ ಬರುತ್ತವೆ. ಆಗ ಹಿಂದೆ ಮಾಡಿದಂತಹ ತಪ್ಪುಗಳನ್ನು ಮಾಡದೆ ಅವಕಾಶಗಳನ್ನು ಸಮರ್ಥವಾಗಿ ಬಳಸಿಕೊಳ್ಳುವುದನ್ನು ಕಲಿಯಬೇಕು.

ಬಹಳಷ್ಟು ಸಂದರ್ಭಗಳಲ್ಲಿ ಭಾವೋದ್ರೇಕ ಅನಗತ್ಯ. ಅದರಿಂದ ಹೊರಬಂದು ಮಾಡುವ ಕೆಲಸದ ಬಗ್ಗೆ ಹೆಚ್ಚಿನ ಆಸಕ್ತಿ ಹಾಗೂ ಗುರಿಯನ್ನು ನಿಗದಿ ಪಡಿಸಿಕೊಳ್ಳಬೇಕು. ಅವಕಾಶದಿಂದ ವಂಚಿತರಾದಾಗ ನಾವು ಮಾಡುವ ತಪ್ಪಿನ ಬಗ್ಗೆಯೂ ಸೂಕ್ತ ರೀತಿಯ ಚಿಂತನೆ ನಡೆಸಬೇಕು. ನಾವು ಹಿಂದೆ ವಂಚಿತರಾದ ಅವಕಾಶದ ಬಗ್ಗೆ ಚಿಂತಿಸುವುದನ್ನು ಬಿಟ್ಟು ಮುಂದಿನ ದಿನಗಳಲ್ಲಿ ಏನು ಮಾಡಬೇಕು ಎನ್ನುವುದನ್ನು ಅರಿಯಬೇಕು.

ಅವಕಾಶಗಳು ಬಾಗಿಲು ಬಡಿದಾಗ ನಾವು ಎಚ್ಚೆತ್ತುಕೊಳ್ಳದಿದ್ದರೆ ಏನಾಗಬಹುದೆಂಬುದಕ್ಕೆ ಒಂದು ಚಿಕ್ಕ ಉದಾಹರಣೆ ಇಲ್ಲಿದೆ.

ಮಗನಿಗೆ ಕೆಲಸ ಸಿಕ್ಕಿಲ್ಲವೆಂದು ಕೊರಗುತ್ತಿದ್ದ ಜಯಮ್ಮನವರಿಗೆ, ಪಕ್ಕದ ಮನೆಯ ಸುಮಿತ್ರಮ್ಮನ ಮಾತುಗಳನ್ನು ಕೇಳಿ ಸಿಹಿ ತಿಂದಷ್ಟೇ ಸಂತೋಷವಾಯಿತು. ಅವರ ಮನೆಯ ಹತ್ತಿರದಲ್ಲಿರುವ ಖಾಸಗಿ ಕಂಪನಿಯೊಂದರಲ್ಲಿ ಕೆಲಸಕ್ಕೆ ಅವಕಾಶ ಇರುವುದಾಗಿಯೂ, ಮೊದಲು ಬಂದವರಿಗೆ ಆದ್ಯತೆ ಎಂದೂ ತಿಳಿಸಿದರು. ನಿರಾಶೆಯಿಂದ ಕಂಗೆಟ್ಟಿದ್ದ ಜಯಮ್ಮನವರು ಖುಷಿಯಿಂದ ಮಗನಿಗೆ ವಿಷಯ ತಿಳಿಸಿದರು. ಮಗ, 'ಅಯ್ಯೋ ಹೋಗಮ್ಮಾ, ಅಲ್ಲಿಗೆಲ್ಲಾ ಬೆಳಗಿನ ಜಾವವೇ ಹೋಗಿ ಸರತಿಯಲ್ಲಿ ನಿಂತು ಕಾಯಬೇಕು. ಕಾದರೂ ನಮ್ಮಂತವರಿಗೆಲ್ಲ ಕೆಲಸ ಸಿಗುವುದು ಕನಸೇ ಸರಿ' ಎಂದು ಉಡಾಫೆಯಿಂದ ಕೈ ಚೆಲ್ಲಿ ಕುಳಿತ. ಸುಮಿತ್ರಮ್ಮನವರ ಮಗ ಬೆಳಿಗ್ಗೆ ಮುಂಚೆಯೇ ಹೋಗಿ ಕಾದು ಕುಳಿತು ಕೆಲಸ ಗಿಟ್ಟಿಸಿಕೊಂಡು ಬಂದ. ಪ್ರಯತ್ನಿಸಿದ ಮಾತ್ರಕ್ಕೆ ಅವಕಾಶ ಉಪಯೋಗ ಆಗುತ್ತದೆ ಎಂದಲ್ಲ. ಆದರೆ ಪ್ರಯತ್ನವನ್ನೇ ಪಡದೆ ನಿರಾಶಾವಾದಿ ಗಳಾಗುವುದು ಸರಿಯಲ್ಲ. ಜೀವನದಲ್ಲಿ ಅವಕಾಶಗಳು ಎಲ್ಲರಿಗೂ ಬರುತ್ತವೆ. ಆದರೆ ಎಷ್ಟೋ ಜನರಿಗೆ ಅದನ್ನು ಗುರುತಿಸುವಷ್ಟು ಸಾಮರ್ಥ್ಯ ಅಥವಾ ತಾಳ್ಮೆ ಇರುವುದಿಲ್ಲ. ಅವಕಾಶಗಳು ಬಂದಾಗ ಅಳೆದು ತೂಗಿ, ಯೋಚಿಸುತ್ತಾ ಕುಳಿತರೆ ಅದು ಇನ್ನಾರದ್ದೋ ಪಾಲಾಗಿರುತ್ತದೆ.

ಕಷ್ಟ ಬಂದಾಗ ಧೃತಿಗೆಡದೆ ಧೈರ್ಯದಿಂದ ಎದುರಿಸಿದರೆ ಆ ಸಂದರ್ಭ ನಮ್ಮ ಕೈಗೆಟುಕಿದಂತೆಯೇ. ಹೆಲೆನ್ ಕೆಲರ್ ಹೇಳಿದಂತೆ, ಅವಕಾಶದ ಒಂದು ಬಾಗಿಲು ಮುಚ್ಚಿದರೆ ಮತ್ತೊಂದು ತೆರೆದುಕೊಳ್ಳುತ್ತದೆ. ಆದರೆ ನಾವು ವಿಷಾದದಿಂದ ಮುಚ್ಚಿರುವ ಬಾಗಿಲಿನೆಡೆಗೆ ನೋಡುತ್ತಾ ತೆರೆದಿರುವ ಬಾಗಿಲನ್ನು ಗಮನಿಸುವುದೇ ಇಲ್ಲ. ಅವಕಾಶಗಳು ಯಾವುದಾದರೂ ಆಗಿರಬಹುದು. ಕೆಲಸದಲ್ಲಿ ಬಡ್ತಿ, ಸಂಬಳದಲ್ಲಿ ಹೆಚ್ಚಳ, ಕುಟುಂಬದೊಂದಿಗೆ ಕಳೆಯುವ ಕಾಲ, ಸತ್ಸಂಗ ಕಲಿಕೆ– ಹೀಗೆ ಅವಕಾಶ ಯಾವುದೇ ರೂಪದಲ್ಲಿರಬಹುದು. ಜಾಗರೂಕತೆಯಿಂದ ಅವುಗಳ ಸದುಪಯೋಗ